# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ : ಸ.ಅ/ವಾರ್ಡ್ ಸಮಿತಿ/ಸಭೆ- 4/2020-21 ದಿನಾಂಕ : 19-11-2020

## -: ಸಭಾ ಸೂಚನಾ ಪತ್ರ-1:-

ಉಲ್ಲೇಖ : 1) ಮಾನ್ಯ ಆಯುಕ್ತರ ಕಛೇರಿಯ ಆದೇಶ ಸಂಖ್ಯೆ : ಬಿ12(5)ಪಿಆರ್/35/ 2020-21 ದಿನಾಂಕ : 21-09-2020.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಸರ್ವಜ್ಞನಗರ ವಿಭಾಗ, ಮಾರುತಿಸೇವಾನಗರ ಉಪ ವಿಭಾಗ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ-59 ಮಾರುತಸೇವಾನಗರ ವ್ಯಾಪ್ತಿಯ ಹಚ್ಚಿನ್ಸ್ ರಸ್ತೆಯಲ್ಲಿ ಉದ್ಯಾನವನದಲ್ಲಿ ದಿನಾಂಕ:21-11-2020 ರಂದು ಬೆಳಿಗ್ಗೆ 11.00 ಗಂಟೆಗೆ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ನಿಯೋಜಿಸಿರುವ ವಾರ್ಡ್‌ನ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ, ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ಸದರಿ ಸಭೆಗೆ ಎಲ್ಲಾ ಸದಸ್ಯರು ಸಕಾಲದಲ್ಲಿ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಕೋರಿದೆ.

## -: ಸಭಾ ಅಜೆಂಡಾ :-

| | |
|---|---|
| 1 | ಹಿಂದಿನ ಸಭೆಯ ನಡವಳಿಗಳನ್ನು ಓದಿ ರೆಕಾರ್ಡ್ ಮಾಡುವುದು |
| 2 | ವಾರ್ಡ್ ಸಮಿತಿಯನ್ನು ರಚಿಸುವ ಬಗ್ಗೆ. |
| 3 | ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಬಗ್ಗೆ ಚರ್ಚಿಸುವ ವಿಚಾರ. |
| 4 | ವಾರ್ಡ್ ವ್ಯಾಪ್ತಿಯ ಕಾಮಗಾರಿಗಳು, ರಸ್ತೆ ಗುಂಡಿಗಳ ದುರಸ್ಥಿಪಡಿಸುವ ಬಗ್ಗೆ. |
| 5 | ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಮತ್ತು ಮಳೆ ನೀರಿನ ಸಮಸ್ಯೆಯ ಬಗ್ಗೆ ಚರ್ಚಿಸುವ ವಿಚಾರ. |
| 6 | ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಬಗ್ಗೆ ಚರ್ಚಿಸುವ ಬಗ್ಗೆ. |
| 7 | ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಬಹುದಾದ ಇತರೆ ವಿಚಾರಗಳು |

(ನೋಡಲ್ ಅಧಿಕಾರಿ ರವರ ಆದೇಶದ ಮೇರೆಗೆ)

ಸಹಿ/-

ಕಾರ್ಯದರ್ಶಿ ವಾರ್ಡ್ ಸಮಿತಿ-59

ಹಾಗೂ ಸಹಾಯಕ ಅಭಿಯಂತರರು,

ವಾರ್ಡ್-59

ಪ್ರತಿಯನ್ನು

1. ವಾರ್ಡ್ ಸಮಿತಿಯ ಎಲ್ಲಾ ಸದಸ್ಯರುಗಳ ಮಾಹಿತಿಗಾಗಿ ಹಾಗೂ ಸಭೆಯಲ್ಲಿ ಭಾಗವಹಿಸಲು ಕೋರಿದೆ.

ಪು.ತಿ.ನೋ

2. ತೋಟಗಾರಿಕಾ ಅಧೀಕ್ಷಕರು, ಪೂರ್ವ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಭಾಗವಹಿಸಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ
3. ಅರಣ್ಯ ಸಂರಕ್ಷಣಾಧಿಕಾರಿಗಳು, ಪೂರ್ವ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಭಾಗವಹಿಸಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿಡಬ್ಲ್ಯೂಎಸ್‌ಎಸ್‌ಬಿ ರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಭಾಗವಹಿಸಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಭಾಗವಹಿಸಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಾರುತಿಸೇವಾನಗರ ಉಪವಿಭಾಗ, ಬಿಬಿಎಂಪಿರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಹಾಜರಾಗಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ(ಸರ್ವಜ್ಞನಗರ), ಬಿಬಿಎಂಪಿರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಹಾಜರಾಗಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ.
8. ಸಹಾಯಕ ಕಂದಾಯ ಅಧಿಕಾರಿಗಳು, ಮಾರುತಿಸೇವಾನಗರ ಉಪವಿಭಾಗ, ಬಿಬಿಎಂಪಿರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಹಾಜರಾಗಲು ಅಥವಾ ತಮ್ಮ ಸಿಬ್ಬಂದಿಯನ್ನು ನಿಯೋಜಿಸಲು ಕೋರಿದೆ.
9. ಪೊಲೀಸ್ ಇನ್ಸ್‌ಫೆಕ್ಟರ್, ಬಾಣಸವಾಡಿ / ರಾಮಮೂರ್ತಿನಗರ ಪೊಲೀಸ್ ಠಾಣೆ ರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಭಾಗವಹಿಸಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ರಸ್ತೆಗಳು ಮತ್ತು ಮೂಲಭೂತ ಸೌಕರ್ಯಗಳು ರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಹಾಜರಾಗಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ಬೃಹತ್ ನೀರುಗಾಲುವೆ(ಎಸ್‌ಡಬ್ಲ್ಯೂಡಿ)ರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಹಾಜರಾಗಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ.
12. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ (ಪೂರ್ವ), ಬಿಬಿಎಂಪಿರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಹಾಜರಾಗಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ.

**ಕಾರ್ಯದರ್ಶಿ ವಾರ್ಡ್ ಸಮಿತಿ–59**

**ಹಾಗೂ ಸಹಾಯಕ ಅಭಿಯಂತರರು,**

**ವಾರ್ಡ್–59**

ವಾರ್ಡ್ ೫೯ ರಲ್ಲಿ ದಿನಾಂಕ ೭/೧೧/೨೦೨೦ ರಂದು
ವಾರ್ಡ್ ಸಮಿತಿ ಸಭೆಯು ನಡೆಯಿತು.

Page No.
Date / /

| | | | |
|---|---|---|---|
| 1) | Thippeswamy JHI | | Thipp. |
| 2) | INDIRA ARUN | REWABE | [signature] |
| 3) | A.R. Suresh | REWABE | [signature] |
| 4) | YOGESH M.S. | | Yogesh |
| 5 | ward marshall | | |
| 6 | Mahesh G | Tax Inspector | [signature] |
| | ROSITA | REWABE | R. [signature] |

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ವಾರ್ಡ್ ಸಂಖ್ಯೆ.59, ಮಾರುತಿಸೇವಾನಗರ ವಾರ್ಡಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಹಚ್ಚಿನ್ಸ್ ರಸ್ತೆಯಲ್ಲಿ ಉದ್ಯಾನವನದಲ್ಲಿ ದಿನಾಂಕ: 21-11-2020 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.**

**ಹಾಜರಿದ್ದ ಸದಸ್ಯರು,**

1. ಶ್ರೀ ನಾರಾಯಣಸ್ವಾಮಿ, ಅಧ್ಯಕ್ಷರು ಹಾಗೂ ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು,
2. ಶ್ರೀ ಕೆ.ಶ್ರೀಕಾಂತ್, ಸದಸ್ಯ ಕಾರ್ಯದರ್ಶಿ ಮತ್ತು ಸಂಚಾಲಕರು,
3. ರಿವ್ಹೋಬ್ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ (ರಿ)
4. ಶಾಂತಕುಮಾರ್ ಲೇಔಟ್ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ (ರಿ).
5. ಶ್ರೀಮತಿ ರೋಜಿತಾ, ಸ್ಥಳೀಯರು,
6. ಶ್ರೀ ತಿಪ್ಪೇಸ್ವಾಮಿ, ಸದಸ್ಯರು ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರು,

**ಹಾಜರಿದ್ದ ಅಧಿಕಾರಿಗಳು**

1. ಶ್ರೀ ಮಹೇಶ್‌ಕುಮಾರ್, ಕರ ವಸೂಲಿಗಾರ, ಮಾರುತಿಸೇವಾನಗರ
2. ಶ್ರೀ ಬಿ ರಾಜು, ಎ.ಎಸ್.ಐ, ಪುಲಿಕೇಶಿನಗರ, (ಪೊಲೀಸ್ ಇಲಾಖೆ)
3. ಶ್ರೀ ಎಸ್.ಎಂ. ಮಾಲಿ, ಪೊಲೀಸ್ ಕಾನ್ಸ್‌ಟೆಬಲ್,

ಈ ಸಭೆಗೆ ಹಾಜರಾಗಿದ್ದ ಅಧ್ಯಕ್ಷರು (ನೋಡೆಲ್ ಅಧಿಕಾರಿ) ಹಾಗೂ ಅಧಿಕಾರಿಗಳನ್ನು ವಾರ್ಡ್‌ನ ಸದಸ್ಯ ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಕಮಿಟಿ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರು ಹಾಗೂ ಸದಸ್ಯರುಗಳನ್ನು ಸ್ವಾಗತ ಕೋರಿ, ಸಭೆಯನ್ನು ಪ್ರಾರಂಭಿಸಲಾಯಿತು.

| ಕ್ರಸಂ | ಮಾಹಿತಿ | ಕ್ರಮ |
|---|---|---|
| i | ತೋಟಗಾರಿಕೆ ಇಲಾಖೆ (**Horticulture Department**) | |
| | ಹೈ ಸ್ಟ್ರೀಟ್ ಮಕ್ಕಳ ಉದ್ಯಾನವನದಲ್ಲಿ ನೀರಿನ ಸಂಪರ್ಕ ಇರುವುದಿಲ್ಲ ಹಾಗೂ ಉದ್ಯಾನವನದ ವಿದ್ಯುತ್ ನಿರ್ವಹಣೆ ಸಮರ್ಪಕವಾಗಿರುವುದಿಲ್ಲ ಹಾಗೂ ಉದ್ಯಾನವನದ ಕಾವಲುಗಾರ ಅವಶ್ಯಕತೆ ಇರುತ್ತದೆ ಎಂದು ಸ್ಥಳಿಯರು ಹಾಗೂ ವಾರ್ಡ್ ಕಮಿಟಿ ಸದಸ್ಯರು ತಿಳಿಸಿರುತ್ತಾರೆ. | ತೋಟಗಾರಿಕೆ ಇಲಾಖೆ<br>(**Horticulture Department**) |
| ii | ಘನತ್ಯಾಜ್ಯ ನಿರ್ವಹಣೆ (**SWM**) | |
| | ವಾರ್ಡ್ ವ್ಯಾಪ್ತಿಯಲ್ಲಿ ಮನೆ ಮನೆಗಳಿಂದ ಕಸ ಸಂಗ್ರಹಣೆ ಮತ್ತು ವಿಲೇವಾರಿ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸದೇ ಇರುವುದರಿಂದ ಸಾರ್ವಜನಿಕರು ರಸ್ತೆಯ ಎಲ್ಲಂದರಲ್ಲಿ ಕಸವನ್ನು ಹಾಕುತ್ತಿರುವುದರ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದರು ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು ಸಂಖ್ಯೆ ಕಡಿಮೆ ಇರುವುದರಿಂದ ಸಮರ್ಪಕವಾಗಿ ಕಸ ನಿರ್ವಹಣೆ ಮಾಡಲು ತೊಂದರೆಯಾಗುತ್ತಿರುವುದಾಗಿ ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಕಿರಿಯ ಆರೋಗ್ಯ ನಿರೀಕ್ಷಕರು<br><br>**AEE - SWM**<br>**JHI** |

| | | |
|---|---|---|
| iii | ಪೊಲೀಸ್ ಇಲ್ಲಾಖೆ – ಸಂಚಾರ/ಅಪರಾಧ (**Police (Traffic/Crime) Department**) | |
| | ಹಚ್ಚಿನ್ಸ್ ರಸ್ತೆ ಹಾಗೂ ನಾರ್ಥ್ ರಸ್ತೆಯ ಜಂಕ್ಷನ್‌ನಲ್ಲಿ ಸಂಚಾರ ದಟ್ಟಣೆ ಹೆಚ್ಚಾಗಿದ್ದು, ಮತ್ತು ಸರಗಳ್ಳತನ ಹೆಚ್ಚಾಗಿರುವುದಾಗಿ ಸಭೆಯಲ್ಲಿ ಪ್ರಸ್ತಾಪಿಸಿ, ಹಾಗೂ ಹೈ ಸ್ಟ್ರೀಟ್ ರಸ್ತೆಯ ಮಕ್ಕಳ ಉದ್ಯಾನವನದಲ್ಲಿ ಅನಾಮಧೆಯ ವ್ಯಕ್ತಿಗಳು ಹೆಚ್ಚಾಗಿದ್ದು ಈ ಬಗ್ಗೆ ಕೂಡಲೇ ಕ್ರಮ ವಹಿಸಲು ಸಭೆಗೆ ತಿಳಿಸಿದರು. | **ಪೊಲೀಸ್ ಇಲಾಖೆ – ಸಂಚಾರ/ಅಪರಾಧ (Police (Traffic/Crime) Department)** |
| iv | ಕಾಮಗಾರಿ (**Engineering Department**) | |
| | ವಾರ್ಡ್ ವ್ಯಾಪ್ತಿಯ ಮೆಕ್ ಪರ್ಸನ್ ರಸ್ತೆ, ವೀಲರ್ ರಸ್ತೆ, ಕಾರ್ಲಸ್ಟನ್ ರಸ್ತೆಯಲ್ಲಿ ಡೆಬ್ರೀಸ್‌ಗಳನ್ನು ತೆರವುಗೊಳಿಸಲು ಹಾಗೂ ವಾರ್ಡಿನಲ್ಲಿ ಸಿಸಿ ಟಿವಿ ಕ್ಯಾಮೆರಾಗಳನ್ನು ಅಳವಡಿಸಲು ಅಗತ್ಯ ಕ್ರಮ ವಹಿಸಲು ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಸಹಾಯಕ ಅಭಿಯಂತರರು **AEE/AE- Engineering** |
| v | ಕಂದಾಯ ಇಲಾಖೆ (**Revenue Department**) | |
| | ವಾರ್ಡ್ ವ್ಯಾಪ್ತಿಯಲ್ಲಿ ಕಂದಾಯ ವಸೂಲಾತಿಯು ನಿರೀಕ್ಷಣಾ ಮಟ್ಟದಲ್ಲಿ ಸಂದಾಯವಾಗದೇ ಇರುವ ಬಗ್ಗೆ ಅಗತ್ಯ ಕ್ರಮ ವಹಿಸಲು ಸಭೆಯಲ್ಲಿ ಪ್ರಸ್ತಾಪಿಸಲಾಯಿತು. | **ಕಂದಾಯ ಇಲಾಖೆ (Revenue Department)** |
| vi | ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ನಿಗಮ (**BWSSB**) | |
| | ವಾರ್ಡ್ ವ್ಯಾಪ್ತಿಯಲ್ಲಿ ಅಲ್ಲಲ್ಲಿ ಒಳಚರಂಡಿ ಪೈಪ್‌ಲೈನ್‌ಗಳು ಹಾಳಾಗಿದ್ದು, ಅದರಿಂದ ಚರಂಡಿ ನೀರು ಹರಿದು ಸುತ್ತಮುತ್ತಲಿನ ಪ್ರದೇಶದಲ್ಲಿ ವಾಸಿಸುತ್ತಿರುವ ನಾಗರೀಕರಿಗೆ ತೊಂದರೆಯಾಗುತ್ತಿರುವುದಾಗಿ, ಅದನ್ನು ಕೂಡಲೇ ದುರಸ್ಥಿಪಡಿಸಲು ಹಾಗೂ ವಾರ್ಡಿನ ಸಾರ್ವಜನಿಕರು ಹೊಸದಾಗಿ ಅಳವಡಿಸಿರುವ ಮೀಟರ್‌ನ ಶುಲ್ಕ ಹೆಚ್ಚಾಗಿರುತ್ತದೆ ಎಂದು ಸಭೆಯಲ್ಲಿ ಆಕ್ಷೇಪಣೆ ಸಲ್ಲಿಸಿರುತ್ತಾರೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು **AEE/AE- BWSSB** |

ಕೊನೆಯದಾಗಿ ಮಾನ್ಯ ಅಧ್ಯಕ್ಷರು, ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು ಮಾತನಾಡಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಬೀದಿ ದೀಪಗಳ ನಿರ್ವಹಣೆ ರವರು ಕಡ್ಡಾಯವಾಗಿ ಹಾಜರಿರಲು ಕ್ರಮವಹಿಸಲು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ವಿಷಯಗಳ ಬಗ್ಗೆ ಆಯಾ ಇಲಾಖೆಯ ಅಧಿಕಾರಿ / ನೌಕರರುಗಳು ಕ್ರಮ ಕೈಗೊಂಡು ಮುಂದಿನ ಸಭೆಗೆ ತಿಳಿಸಲು ಆದೇಶಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

23/11/2020

ವಾರ್ಡ್ ಸಮಿತಿ ಸದಸ್ಯ ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ.59, ಮಾರುತಿಸೇವಾನಗರ

ಅಧ್ಯಕ್ಷರು
(ನೋಡೆಲ್ ಅಧಿಕಾರಿಗಳು)
ವಾರ್ಡ್ ಸಂಖ್ಯೆ.59, ಮಾರುತಿಸೇವಾನಗರ

<u>ಪ್ರತಿಯನ್ನು</u>

1) ವಲಯ ವಿಶೇಷ ಆಯುಕ್ತರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮುಖ್ಯ ಅಭಿಯಂತರರು (ಪೂ) ರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗಾಗಿ.
5) ವಾರ್ಡ್ ಕಮಿಟಿಯ ಸದಸ್ಯರಿಗೆ / ಕಛೇರಿ ಕಡತಕ್ಕೆ.